ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಸಂಚಾರಿ ನಿಯಮ ಉಲ್ಲಂಘನೆಗೆ ವಿಧಿಸುವ ದಂಡಗಳ ಮಾಹಿತಿ

ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

1282 (1502) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ವಾಹನ ಚಲಾಯಿಸುವಾಗ ಮೊಬೈಲ್ ಬಳಸುವ ಎಷ್ಟು ವಾಹನ ಸವಾರರ ಮೇಲೆ ದಂಡ ವಿಧಿಸಲಾಗಿದೆ ; (ಮಾಹಿತಿ ನೀಡುವುದು)

(ಆ) ಕರ್ತವ್ಯದ ಮೇಲಿರುವಾಗ ವಾಹನ ಸಂಚಾರದ ಬಗ್ಗೆ ಗಮನ ಕೊಡದೆ ಮೊಬೈಲ್ ಬಳಸುವ ಪೊಲೀಸರ ಬಗ್ಗೆ ತೆಗೆದುಕೊಂಡ ಕ್ರಮಗಳೇನು ; ಈ ಬಗ್ಗೆ ಸೂಚನೆಗಳನ್ನು ನೀಡಲಾಗಿದೆಯೇ ; ಅಥವಾ ಸುತ್ತೋಲೆ ಹೊರಡಿಸಲಾಗಿದೆಯೇ ; (ಹೊರಡಿಸಿದ್ದರೆ, ಅದರ ಪ್ರತಿ ನೀಡುವುದು)

(ಇ) ಸಂಚಾರಿ ಅಪರಾಧಗಳಿಗೆ ವಿಧಿಸುವ ದಂಡಗಳ ಹಣದ ಬಗ್ಗೆ ಸಾರ್ವಜನಿಕರ ತಿಳುವಳಿಕೆಗಾಗಿ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಲಾಗಿದೆಯೇ ;

(ಈ) ಕೇಂದ್ರ ಸರ್ಕಾರ ವಿಧಿಸಿದ್ದ ದಂಡದ ಹಣ ಮತ್ತು ನಂತರ ರಾಜ್ಯ ಸರ್ಕಾರ ನಿಗಧಿಪಡಿಸಿದ ದಂಡದ ಹಣದ ಬಗ್ಗೆ ವ್ಯತ್ಯಾಸಗಳಿರುವುದರಿಂದ ಸ್ಪಷ್ಟನೆ ದೃಷ್ಟಿಯಿಂದ ಸರಿಯಾದ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಕಟಣೆ ಮೂಲಕ ತಿಳಿಸಲಾಗುವುದೇ ?